**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ,**
**ಬೆಂಗಳೂರು – 560 001**

ಸಂಖ್ಯೆ: ಯೋ 4 ಎಸ್‌ಸಿಪಿ ಟಿಎಸ್‌ಪಿ ಎಸ್‌ಎಸ್‌ಎಲ್‌ಸಿ 1/2016–17 ದಿನಾಂಕ: 07.10.2016

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಕಲಿಕೆಯಲ್ಲಿ ಹಿಂದುಳಿದ ಇತರೆ ವರ್ಗದ ವಿದ್ಯಾರ್ಥಿಗಳಿಗೆ ದಸರಾ ರಜೆ ಅವಧಿಯಲ್ಲಿ ವಿಶೇಷ ತರಬೇತಿ ಕಾರ್ಯಕ್ರಮವನ್ನು ಪರಿಣಾಮ –ಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸಮ ಸಂಖ್ಯೆ ಜ್ಞಾಪನ ಪತ್ರ ದಿನಾಂಕ: 26.09.2016

– – –

**ಕಡ್ಡಾಯವಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳು:–**

- ✓ ವಿಶೇಷ ಬೋಧನೆಯ ಮೊದಲ ದಿನ ಎಲ್ಲಾ ವಿದ್ಯಾರ್ಥಿಗಳ ವಿಭಾಗವಾರು, ಬಯೋಮೆಟ್ರಿಕ್ [ಫಿಂಗರ್ ಪ್ರಿಂಟ್ ಸ್ಕಾನರ್] ಅಳವಡಿಕೆ ಮೂಲಕ ನೋಂದಣಿ ಮಾಡಿಕೊಳ್ಳುವುದು.
- ✓ ಈಗಾಗಲೇ ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ತರಬೇತಿಯಲ್ಲಿ ತಿಳಿಸಿರುವಂತೆ ಶಾಲೆಯ ಕೋಡ್ ಬದಲಿಗೆ ಆಯಾ ತಾಲ್ಲೂಕುಗಳ ಕೇಂದ್ರವಾರು ಶಾಲೆಯ ಡೈಸ್ ಕೋಡ್‌ನ್ನು ನಮೂದಿಸುವುದು.
- ✓ ಕೇಂದ್ರದ ಸಂಯೋಜಕರು [ಕೋ–ಆರ್ಡಿನೇಟರ್], ವಿಶೇಷ ಬೋಧನೆಯ ತರಗತಿಯ ಬೋಧಕರು ಹಾಗೂ ನೋಡಲ್ ಅಧಿಕಾರಿಗಳು ಕಡ್ಡಾಯವಾಗಿ ಬಯೋಮೆಟ್ರಿಕ್ [ಫಿಂಗರ್ ಪ್ರಿಂಟ್ ಸ್ಕಾನರ್]ನ ಮೂಲಕ ಹಾಜರಾತಿಯನ್ನು ನಿರ್ವಹಿಸುವುದು.
- ✓ ಪ್ರತಿ ದಿನ ಬೆಳಿಗ್ಗೆ ಆಯಾ ಕೇಂದ್ರದ ಸಂಯೋಜಕರು [ಕೋ–ಆರ್ಡಿನೇಟರ್] ತರಗತಿವಾರು [9 ಮತ್ತು 10ನೇ ತರಗತಿ]/ವಿಭಾಗವಾರು ವಿದ್ಯಾರ್ಥಿಗಳ ಹಾಜರಾತಿಯನ್ನು ಎಸ್‌ಎಂಎಸ್ ಮೂಲಕ ಈ ಕೆಳಕಂಡ ಮೊಬೈಲ್ ಸಂಖ್ಯೆಗಳಿಗೆ ತಪ್ಪದೇ ಕಳುಹಿಸುವುದು. [ಮೊಬೈಲ್ ಸಂಖ್ಯೆ: 9448999424 ಮತ್ತು 9686798425].
- ✓ ಪ್ರತಿ ದಿನ ವಿದ್ಯಾರ್ಥಿಗಳ ಹಾಜರಾತಿಯನ್ನು [ಫಿಂಗರ್ ಪ್ರಿಂಟ್ ಸ್ಕಾನರ್] ಪಡೆದು ಅದೇ ದಿನ ಸಾಯಂಕಾಲದೊಳಗೆ ಅಪ್ ಲೋಡ್ ಮಾಡುವುದು.
- ✓ ಪ್ರತಿ ಕೇಂದ್ರದಲ್ಲಿ ಈಗಾಗಲೇ ನೀಡಿರುವ ಮಾಡ್ಯೂಲ್ಸ್‌ಗಳಿಗೆ ಅನುಗುಣವಾಗಿ ಹಾಗೂ ಕ್ರಿಯಾ ಯೋಜನೆಯ ಅನ್ವಯ ವೇಳಾಪಟ್ಟಿ ಮತ್ತು ಬೋಧನೆ ಕಲಿಕೆ ತರಗತಿ ಪ್ರಕ್ರಿಯೆಗೆ ಅಗತ್ಯವಾದ ಎಲ್ಲಾ ಸಿದ್ಧತೆಗಳನ್ನು ಪೂರ್ವಭಾವಿಯಾಗಿಯೇ ಸಿದ್ಧಪಡಿಸಿಕೊಂಡು ನಿರ್ವಹಿಸತಕ್ಕದ್ದು.
- ✓ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಪೂರ್ವ ಪರೀಕ್ಷೆಯನ್ನು ನಡೆಸಿ, ತರಗತಿವಾರು/ವಿಷಯವಾರು ವಿಶ್ಲೇಷಣೆಯನ್ನು ನಡೆಸುವುದು ಹಾಗೂ ಇದರ ಫಲಿತಗಳಿಗೆ ಅನುಗುಣವಾಗಿ ಅಗತ್ಯ ಕಾರ್ಯತಂತ್ರಗಳ ಮೂಲಕ ಕಲಿಕೆಯನ್ನು ಉತ್ತಮಪಡಿಸುವುದು.
- ✓ ವಿಶೇಷ ಬೋಧನೆಯ ಅಂತಿಮ ದಿನ ಸಾಫಲ್ಯ ಪರೀಕ್ಷೆಯನ್ನು [Post Test] ನಿರ್ವಹಿಸಿ, ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆಗಳ ಫಲಿತಗಳನ್ನು ವಿಶ್ಲೇಷಿಸಿ ಕೇಂದ್ರವಾರು ವರದಿಯನ್ನು ಸಿದ್ಧಪಡಿಸಿ, ಅಗತ್ಯ ಅನುಸರಣೆ ಮಾಡುವುದು.
- ✓ ತಮ್ಮ ಜಿಲ್ಲೆಗೆ ಸಂಬಂಧಿಸಿದಂತೆ, ಜಿಲ್ಲಾ ಹಂತದಲ್ಲಿ ವಿಶ್ಲೇಷಿಸಿ, ಸಂಬಂಧಿಸಿದ ದಾಖಲೆ/ಛಾಯಾ ಚಿತ್ರಗಳೊಂದಿಗೆ ಕ್ರೋಢೀಕೃತ ಸಮಗ್ರ ವರದಿಯ ಸಾಫ್ಟ್ ಪ್ರತಿಯನ್ನು **ddpiplanning@gmail** ಇ–ಮೇಲ್ ಮಾಡುವುದು ಹಾಗೂ ಹಾರ್ಡ್ ಪ್ರತಿಯನ್ನು ಅಂಚೆ ಮೂಲಕ ಯೋಜನಾ ಶಾಖೆಗೆ **ದಿನಾಂಕ: 14.11.2016ರೊಳಗೆ** ತಲುಪುವಂತೆ ಕಳುಹಿಸುವುದು.

ಸಹನಿರ್ದೇಶಕರು[ಶಾಲಾ ಶಿಕ್ಷಣ]

ಇವರಿಗೆ ಅಗತ್ಯ ಕ್ರಮಕ್ಕಾಗಿ:–

1. ಉಪನಿರ್ದೇಶಕರು[ಆಡಳಿತ] ಮತ್ತು ಉಪನಿರ್ದೇಶಕರು[ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ, 1.ಬೆಂಗಳೂರು ಉತ್ತರ, 2.ಬೆಂಗಳೂರು ದಕ್ಷಿಣ, 3.ಚಿಕ್ಕಬಳ್ಳಾಪುರ, 4.ಚಿತ್ರದುರ್ಗ, 5.ದಾವಣಗೆರೆ, 6.ಕೋಲಾರ, 7.ಮೈಸೂರು, 8.ಚಾಮರಾಜನಗರ, 9.ಚಿಕ್ಕೋಡಿ, 10.ಬಾಗಲಕೋಟೆ 11.ವಿಜಯಪುರ, 12.ಕಲಬುರಗಿ, 13.ಬಳ್ಳಾರಿ, 14.ಬೀದರ್, 15.ಕೊಪ್ಪಳ 16.ರಾಯಚೂರು, 17.ಯಾದಗಿರಿ, 18.ಶಿವಮೊಗ್ಗ ಮತ್ತು 19. ಧಾರವಾಡ.

\\10.96.135.22\e\D\Planning\18-2016.doc

Scanned by CamScanner